(ಇ) ಉದ್ಭವಿಸುವುದಿಲ್ಲ.

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ, 'ಅ' ಪ್ರಶ್ನೆಗೆ ಮಾನ್ಯ ಸಚಿವರು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ತಿಳಿಸಿದ್ದಾರೆ. ಆದರೆ ಎಷ್ಟೋ ಸಲ ಸಹಕಾರ ಸಂಘಗಳ ಮೂಲಕ ಹಾಗೂ ಶಾಖೆಗಳ ಮೂಲಕ ಸರ್ಕಾರಕ್ಕೆ ಮನವಿಯನ್ನೂ ಒಪ್ಪಿಸಲಾಗಿತ್ತು. ಈ ವಿಷಯ ಕುರಿತು ಚರ್ಚೆ ಆಗಿದೆ. ಸರಿಯಾಗಿ ಪ್ರಯತ್ನ ಮಾಡಲು ಕ್ರಮ ಕೈಗೊಳ್ಳಲಾಗುವುದೆಂದು ಭರವಸೆಯನ್ನೂ ಸಂಬಂಧಪಟ್ಟ ಮಂತ್ರಿಗಳು ಕೊಟ್ಟಿದ್ದಾರೆ. ಇನ್ನೂ ಒಂದು ಪ್ರಶ್ನೆಯನ್ನು ನಾನು ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಿಂದ ಯಾವ ಯಾವ ಸಂಘಗಳು ನೂಲನ್ನು ಎಷ್ಟು ಕೇಳಿದ್ದಾರೆ ಹಾಗೂ ಎಷ್ಟು ನೂಲನ್ನು ಸಪ್ಲೈ ಮಾಡಲಾಗಿದೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ಮಾನ್ಯ ಸಚಿವರು ಒದಗಿಸಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಸದಸ್ಯರು ಈ ಬಗ್ಗೆ ಅಂಕಿ ಅಂಶಗಳನ್ನು ಕೇಳಿದ್ದಾರೆ, ಅದನ್ನು ಒದಗಿಸಿಕೊಡುತ್ತೇನೆ. ಆದರೆ ಅವರು ಇಲ್ಲಿ ಹೇಳಿರುವ ಪ್ರಕಾರ ಯಾವ ತೊಂದರೆಯೂ ಆಗಿಲ್ಲ. ಮಾನ್ಯ ಸದಸ್ಯರು ಎಲ್ಲಿಯಾದರೂ ತೊಂದರೆಯಾಗಿದೆ ಎಂದು ಇದರ ಬಗ್ಗೆ ನನ್ನ ಗಮನಕ್ಕೆ ತಂದರೆ ಅದನ್ನು ಸರಿಪಡಿಸಿಕೊಡುತ್ತೇನೆ.

ಶ್ರೀ ಕೆ ಕುಶಾಲ.—ಮಾನ್ಯ ಅಧ್ಯಕ್ಷರೇ, ಸಹಕಾರ ಸಂಘಗಳು ಡಿ. ಸಿ. ಸಿ. ಬ್ಯಾಂಕ್ ಮೂಲಕ ನೇಕಾರರಿಗೆ ಸಾಲ ನೀಡುತ್ತವೆ. ಇದರ ಜೊತೆಗೆ ಸಹಕಾರ ಸಂಘಗಳು ೪ ಪರ್ಸೆಂಟ್ ಸಹಾಯ ಧನ ನೀಡಬೇಕು. ಆದರೆ ಕಳೆದ ನಾಲ್ಕು ವರ್ಷಗಳಿಂದ ಸಹಾಯಧನವನ್ನು ಯಾಕೆ ನೀಡಲಿಲ್ಲ ಎಂದು ಕೇಳುತ್ತೇನೆ? ಸಾಲವನ್ನು ಪಡೆದುಕೊಂಡ ನೇಕಾರರುಗಳು ಸಹಾಯಧನ ಸಿಕ್ಕದೇ ಇರುವುದರಿಂದ ಬಹಳ ಕಷ್ಟ ಪಡುತ್ತಿದ್ದಾರೆ. ಇದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಇದು ನಮ್ಮ ಇಲಾಖೆಗೆ ಸಂಬಂಧಪಟ್ಟಿದ್ದು ಅಲ್ಲ. ಇದು ಸಹಕಾರ ಇಲಾಖೆಗೆ ಬರುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಪ್ರಶ್ನೆಯನ್ನು ಬೇರೆ ರೂಪದಲ್ಲಿ ಕೇಳಲಿ.

ಯುರೇನಿಯಂ ಮತ್ತು ಥೋರಿಯಂ ನಿಕ್ಷೇಪಗಳ ಬಗ್ಗೆ

೧೫೮ (೬೩೫) ಶ್ರೀ ನಂಜಪ್ಪ (ಶ್ರೀ ಪಿ. ಎಂ. ಚಿಕ್ಕಬೋರಯ್ಯ ರವರ ಪರವಾಗಿ).—ಮಾನ್ಯ ಸಣ್ಣ ಪ್ರಮಾಣದ ಉದ್ದಿಮೆಗಳ ಹಾಗೂ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಮೈಸೂರು ಜಿಲ್ಲೆಯಲ್ಲಿ ಯುರೇನಿಯಂ ಮತ್ತು ಥೋರಿಯಂ ನಿಕ್ಷೇಪಗಳೆಷ್ಟಿವೆ ?

ಆ) ಹಾಗಿದ್ದಲ್ಲಿ ಅವುಗಳಲ್ಲಿ ದೊರಕುವ ಅಣು ಶಕ್ತಿ ಇಂಧನಗಳ ಪ್ರಮಾಣವೆಷ್ಟು ?

ಇ) ಅವುಗಳನ್ನು ಶಾಂತಿಯುತ ಕಾರ್ಯಗಳ ಬಳಕೆಗಾಗಿ ಉಪಯೋಗಿಸಲು ಯೋಚಿಸಿದ್ದೀರಾ ? ಹಾಗಿದ್ದರೆ ಆ ಕಾರ್ಯಕ್ರಮಗಳಾವುವು ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಗಣಿ ಮತ್ತು ಭೂ ವಿಜ್ಞಾನ ಸಚಿವರು).—

ಅ) ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಮೈಸೂರು ಜಿಲ್ಲೆಯಲ್ಲಿ ಯುರೇನಿಯಂ ಮತ್ತು ಥೋರಿಯಂ ನಿಕ್ಷೇಪಗಳ ಅನ್ವೇಷಣೆ ನಡೆಸಿಲ್ಲ.

ಆ) (ಅ) ಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇದನ್ನು ನಾವು ಮಾಡುವುದಿಲ್ಲ, ಕೇಂದ್ರ ಸರ್ಕಾರದವರು ಮಾಡುತ್ತಾರೆ.

ಕೆ. ಇ. ಬಿ. ಯವರು ಖಾಸಗಿಯವರಿಂದ ವಿದ್ಯುತ್‌ಕಂಬಗಳನ್ನು ಖರೀದಿಸುವುದು

೧೫೯ (೬೮೫) ಶ್ರೀ ಕೆ. ಪ್ರಭಾಕರಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ವಿದ್ಯುತ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕೆಇಬಿ ತನ್ನ ಬಳಕೆಗಾಗಿ ೧೯೮೫-೮೬ರ ರಿಂದ ೧೯೮೬-೧೯೮೭ರಹಾಗೂ ೧೯೮೭-೮೮ರವರೆಗೆ ಖಾಸಗಿಯವರಿಂದ ಎಷ್ಟು ವಿದ್ಯುತ್ ಕಂಬಗಳನ್ನು ಖರೀದಿಸಿದೆ ? (ವರ್ಷವಾರು) ವಿವರಗಳನ್ನು ಒದಗಿಸುವುದು.

ಆ) ಈ ಕಂಬಗಳ ಗಾತ್ರವಾರು ಮೌಲ್ಯವೆಷ್ಟು ?

ಇ) ಈ ಕಂಬಗಳ ಖರೀದಿ ಮಾಡುವಲ್ಲಿ ನಡೆಯುತ್ತೆನ್ನಲಾದ ಆರ್ಥಿಕ ಅವ್ಯವಹಾರಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ತಪ್ಪಿತಸ್ಥರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಸಚಿವರು).—

ಅ)	೧) ೧೯೮೫-೮೬	೨,೯೨,೭೧೨	೫೩೬೬೦
	೨) ೧೯೮೬-೮೭	೩,೦೯,೮೦೮	೪೮೪೨೧
	೩) ೧೯೮೭-೮೮	೨,೭೪,೩೦೯	೫೭೩೨೫

ಆ) ವಿವರ ಅನುಭಂದದಲ್ಲಿ ನೀಡಿದೆ.

ಇ) ಇಲ್ಲ.

ಈ) 'ಇ' ನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ಜಿ. ಎಸ್. ಆಚಾರ್ (ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿಯವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ನೀಡಿದಂಥ ಉತ್ತರದಲ್ಲಿ ಆರ್‌ಸಿಸಿ ಮತ್ತು ಪಿಸಿಸಿ ಕಂಬಗಳನ್ನು ಖರೀದಿ ಮಾಡುವ ೧೯೮೫-೮೬ರಲ್ಲಿ ೮.೮ ಕೋಟಿ ಖರ್ಚಾಗಿದೆ. ೧೯೮೬-೮೭ರಲ್ಲಿ ೮.೧ ಕೋಟಿ, ೧೯೮೭-೮೮ರಲ್ಲಿ ೬.೩ ಕೋಟಿ ಖರ್ಚು ಆಗಿದೆ. ಆಮೇಲೆ ದರ ೧೯೮೫-೮೬ರಲ್ಲಿ ೪೧೫.೮೬ ೧೯೮೬-೮೭ ರಲ್ಲಿ ೩೭೫.೭೫, ೧೯೮೭-೮೮ರಲ್ಲಿ ೩೨೪.೦೦ ರೂಪಾಯಿ ಇದೆ. ವರ್ಷ ವರ್ಷ ಬೆಲೆಗಳು ಏರುತ್ತಾ ಇರುವ ಸಂದರ್ಭದಲ್ಲಿ ಇದರ ಬೆಲೆ ಇಳಿಯುತ್ತಾ ಇದೆ. ಇದನ್ನು ಖರೀದಿ ಮಾಡುವಾಗ ಸರಿಯಾಗಿ ಟೆಂಡರ್ ಕರೆದಿಲ್ಲ. ಯಾರಿಗೋ ಫೇವರಿಟಿಸಂ ತೋರಿಸುತ್ತಿದ್ದಾರೆ ಎಂಬ ಉದ್ದೇಶದಿಂದ ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಪ್ರಶ್ನೆಯನ್ನು ಕೇಳಿದ್ದಾರೆ. ಆದುದರಿಂದ ಇನ್ನು ಮೇಲಾದರೂ ಟೆಂಡರ್ ಕರೆದು ಸರಿಯಾದ ರೀತಿಯಲ್ಲಿ ವ್ಯವಹಾರ ನಡೆಸುತ್ತೀರಾ? ಇದರಲ್ಲಿ ಸುಮಾರು ೨ ಕೋಟಿ ರೂಪಾಯಿ ಕೆ. ಇ. ಬಿ. ಗೆ ನಷ್ಟವಾಗಿರುವುದರಿಂದ ಇದರ ಬಗ್ಗೆ ಸಮಗ್ರ ತನಿಖೆ ನಡೆಸಿ, ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಅಧ್ಯಕ್ಷರೆ, ಈ ಪಿಸಿಸಿ ಮತ್ತು ಆರ್‌ಸಿಸಿ ಪೋಲ್‌ಗಳ ಏನಿದೆ, ಇದರಲ್ಲಿ ಆರ್‌ಸಿಸಿ ಪೋಲುಗಳನ್ನು ನಮ್ಮ ಕೇಂದ್ರಗಳಲ್ಲಿ ನಾವು ತಯಾರು ಮಾಡುತ್ತೇವೆ. ನಮ್ಮದು ೨೫ ಕೇಂದ್ರಗಳಿವೆ, ಅಲ್ಲಿ ಮಾಡುತ್ತೇವೆ. ಅಲ್ಲಿ ನಾವು ಮಾಡಿದಾಗ ಬೆಲೆ ಎಷ್ಟಾಗುತ್ತದೆ ಎಂದು ಗೊತ್ತಾಗುತ್ತದೆ. ನಾವು ಏನು ಕೊಂಡುಕೊಳ್ಳುತ್ತೇವೆ ಅದಕ್ಕಿಂತ ಇದರಲ್ಲಿ ಬೆಲೆ ಹೆಚ್ಚಿಗೆ ಬೀಳುತ್ತದೆ. ಇಲ್ಲಿ ಕಾಂಪಿಟೇಷನ್ ಜಾಸ್ತಿಯಾದಾಗ ಬೆಲೆ ಕಡಿಮೆಯಾಗಬಹುದು. ಆದ್ದರಿಂದ ಸಂಬಂಧಪಟ್ಟ ಎಲ್ಲರನ್ನೂ ಕರೆಸಿ ಅತಿ ಕಡಿಮೆ ದರ ಕೋಟ್ ಮಾಡಿದವರಿಗೆ ಕೆಲಸ ಕೊಡುವುದು. ಇದರಲ್ಲಿ ಕಾಂಪಿಟಿಷನ್ ಇದುವುದರಿಂದ ರೇಟ್‌ನಲ್ಲಿ ವ್ಯತ್ಯಾಸವಾಗುವುದು ಸಾಧ್ಯ. ಈಗ ಸಿಮೆಂಟ್ ತೆಗೆದುಕೊಂಡರೆ, ಅದಕ್ಕೆ ೧೯೮೫-೮೬ರಲ್ಲಿ ಇದ್ದಂಥ ದರ ಇವತ್ತು ಇಲ್ಲ. ಆಗ ೭೦-೮೦ ರೂಪಾಯಿ ಇದ್ದದ್ದು ಇವತ್ತು ೬೦ ರೂಪಾಯಿಗೆ ಸಿಗುತ್ತದೆ. ಕೆಲವು ಕಡೆ ಸಿಮೆಂಟನ್ನು ಲೆವಿ ರೇಟ್‌ನಲ್ಲಿ ಒದಗಿಸತಕ್ಕ ವ್ಯವಸ್ಥೆ ಮಾಡಿದ್ದೇವೆ, ಲೆವಿ ರೇಟ್‌ನಲ್ಲಿ ಒದಗಿಸದೇ ಇದ್ದರೆ ರೇಟ್ ಜಾಸ್ತಿ ಬೀಳುತ್ತದೆ. ಆಮೇಲೆ ಕೈಯಲ್ಲಿ ಮಾಡುವುದನ್ನು ಕೈಬಿಟ್ಟು ಕೆಲವು ಮಿಷನ್‌ಗಳನ್ನು ತಂದು ಮಾಡುತ್ತಾರೆ. ಕೈಯಲ್ಲಿ ಮಾಡುವಾಗ ೧೦-೨೦ ಕಂಬಗಳನ್ನು ಮಾಡುತ್ತಿದ್ದ ಜಾಗದಲ್ಲಿ ಇವತ್ತು ಮಿಷನ್‌ಗಳನ್ನು ತಂದು ೧೦೦-೨೦೦ ಕಂಬಗಳನ್ನು ಮಾಡುವಂಥ ಸಂದರ್ಭದಲ್ಲಿ ಆಟೋಮ್ಯಾಟಿಕ್ ಆಗಿ ರೇಟ್ ಕಡಿಮೆಯಾಗುತ್ತದೆ. ನಮ್ಮ ಡಿಮ್ಯಾಂಡ್ ಜಾಸ್ತಿಇದ್ದಾಗ ಮೆಕನೈಸ್ ಮಾಡುವುದರಿಂದ ರೇಟ್ ಇದರಲ್ಲಿ ಕಡಿಮೆಯಾಗಿದೆಯೇ ವಿನಃಅವ್ಯವಹಾರವಿದೆ ಎಂದು ಮಾನ್ಯ ಸದಸ್ಯರು ಯೋಚನೆ

ಮಾಡುವುದು ಸರಿಯಲ್ಲ. ನಾವೇ ಖುದ್ದು ಸ್ವಂತ ಕೇಂದ್ರಗಳಲ್ಲಿ ಉತ್ಪಾದನೆ ಮಾಡಿದರೆ ದರಹೆಚ್ಚಿಗೆ ಬೀಳುತ್ತದೆ.

ಬೈಂದೂರಿನಲ್ಲಿ ವಿದ್ಯುತ್ ಸಬ್ ಸ್ಟೇಷನ್‌ನ ಸ್ಥಾಪನೆ

೧೬೦ (ಶಿಲ್ಕ್) ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಬೈಂದೂರಿಗೆ ಮಂಜೂರಾದ ವಿದ್ಯುತ್ ಸಬ್ ಸ್ಟೇಷನನ್ನು ಇನ್ನೂ ಸ್ಥಾಪಿಸದಿರಲು ಕಾರಣವೇನು ?

ಆ) ಹಾಗಿದ್ದಲ್ಲಿ ಎಂದಿನಿಂದ ಕಾರ್ಯಾರಂಭ ಮಾಡಲಾಗುವುದು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮಂತ್ರಿಗಳು).—

ಅ) ಬೈಂದೂರು ಸಬ್ ಸ್ಟೇಷನ್ ಮತ್ತು ಇದಕ್ಕೆ ಸಂಬಂಧಿಸಿದ ೩೩ ಕೆ. ವಿ. ಲೈನಿನ ಕೆಲಸ ಕೈಗೆತ್ತಿಕೊಳ್ಳಲಾಗಿದೆ.

ಆ) ಈ ಎರಡೂ ಕೆಲಸಗಳು ೧೯೬೯-೭೦ರಲ್ಲಿ ಮುಗಿದು ಸಬ್ ಸ್ಟೇಷನ್ ಕಾರ್ಯಾರಂಭ ಮಾಡುವ ನಿರೀಕ್ಷೆಯಿದೆ.

ಶ್ರೀ ಜಿ.ಎಸ್. ಆಚಾರ್.—ಅಧ್ಯಕ್ಷರೇ, ಕಳೆದವರ್ಷವೇ ಇದರ ಕಾರ್ಯಾರಂಭ ಮಾಡುತ್ತೇವೆಂದು ಮಾನ್ಯ ಸಚಿವರು ಆಶ್ವಾಸನೆಯನ್ನು ಕೊಟ್ಟಿದ್ದರು. ದುರ್ದೈವ ಅಂದರೆ ಸಬ್ ಸ್ಟೇಷನ್ ಕಾರ್ಯಕ್ಕೆ ಬೇಕಾದ ಸೈಟು ಪಡೆಯಲಿಕ್ಕಾಗಿ ಸಂಬಂಧಪಟ್ಟ ಇಂಜಿನಿಯರ್, ಅಸಿಸ್ಟೆಂಟ್ ಕಮೀಷನರ್, ನಾವೆಲ್ಲ ಹೋಗಿ ಈ ಕೆಲಸವನ್ನು ಎಲ್ಲಿ ಎತ್ತಿಕೊಳ್ಳಬೇಕೆಂದು ನಿಗದಿ ಮಾಡಿದ್ದರೂ ಇನ್ನೂ ಕೆಲಸ ಆಗಿಲ್ಲ. ಇನ್ನೂ ಜಾಗವನ್ನು ಸ್ವಾಧೀನಕ್ಕೆ ತೆಗೆದುಕೊಂಡಿಲ್ಲ. ಇಲಾಖೆಯಲ್ಲಿ ಈ ಕೆಲಸ ಮಂದಗತಿಯಲ್ಲಿ ನಡೆಯುತ್ತಿದೆ. ಈ ಕೆಲಸ ೧೯೬೯-೭೦ರಲ್ಲಿ ಆಗುತ್ತದೆ ಎನ್ನುವುದು ಕಷ್ಟ. ಬೈಂದೂರು ವಿದ್ಯುಚ್ಛಕ್ತಿಗೆ ಸರಬರಾಜು ವಿಚಾರ ಕುರಿತು ತಪ್ಪಾಗಿ ಗೊತ್ತೇ ಇದೆ. ಆದ್ದರಿಂದ, ಆದಷ್ಟು ಬೇಗ ಈ ಕೆಲಸವನ್ನು ಪ್ರಾರಂಭ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಇದಕ್ಕೆ ಬೇಕಾಗತಕ್ಕ ಸಲಕರಣೆಗಳು ಮುಖ್ಯ. ಈ ಕೆಲಸ ಪ್ರಾರಂಭ ಮಾಡುವುದಕ್ಕೆ ವೈರ್ ಮತ್ತು ಕಂಬಗಳು ಮುಖ್ಯ. ಈಗ ವೈರ್ ಸ್ಟಾಕ್ ಇದೆ. ಕಂಬಗಳಿಗೆ ಆರ್ಡರ್ ಕೊಟ್ಟಿದ್ದೇವೆ. ಇನ್ನೊಂದು ತಿಂಗಳಲ್ಲಿ ಕಂಬಗಳು ಸರಬರಾಜು ಆಗುವುದಿದೆ. ಇನ್ನು ಸೈಟಿನ ವಿಚಾರದಲ್ಲಿ ಇನ್ನೂ ಜಾಗ ಸ್ವಾಧೀನಕ್ಕೆ ತೆಗೆದುಕೊಂಡಿಲ್ಲ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದರ ವಿಚಾರದಲ್ಲಿ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಕಂಪ್ಲಿಂಟ್ ಆಗಿದೆ. ಜಾಗ ಬರತಕ್ಕ ಸ್ಥಿತಿಯಲ್ಲಿದೆ. ಆದ್ದರಿಂದ, ಆದಷ್ಟು ಬೇಗ ಒಂದೆರಡು ತಿಂಗಳಲ್ಲಿ ಕೆಲಸವನ್ನು ಪ್ರಾರಂಭ ಮಾಡಿ ೧೯೬೯-೭೦ರಲ್ಲಿ ಏನು ಭರವಸೆಯನ್ನು ಕೊಟ್ಟಿದ್ದೆವು. ಆ ಸಮಯಕ್ಕೆ ಮುಗಿಸತಕ್ಕ ಪ್ರಯತ್ನವನ್ನು ತೀವ್ರವಾಗಿ ಮಾಡುತ್ತೇವೆಂಬ ಭರವಸೆಯನ್ನು ಕೊಡುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ೬೬೩ರ ಬಗ್ಗೆ ಮಾನ್ಯ ಮಂತ್ರಿಗಳು ಕಾಲವಕಾಶ ಬೇಡಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಕೈಮಗ್ಗಗಳು

೧೬೨ (೬೫೦) ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಮಾನ್ಯ ಸಣ್ಣ ಪ್ರಮಾಣದ ಉದ್ಯಮಗಳು ಮತ್ತು ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ.—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಕೈಮಗ್ಗಗಳಿವೆ ?

(ಆ) ಈ ಕೈಮಗ್ಗಗಳಿಂದ ವರ್ಷಕ್ಕೆ ಎಷ್ಟು ಆದಾಯ ಬರುತ್ತದೆ?

(ಇ) ಸರ್ಕಾರವು ದಕ್ಷಿಣ ಕನ್ನಡ ಜಿಲ್ಲಾ ನೇಕಾರರಿಗೆ ಯಾವ ಸವಲತ್ತುಗಳನ್ನು ನೀಡುತ್ತದೆ ?